35.	37ರ ಪೈಕಿ ಶ್ರೀ ಕೆ.ಬಿ. ಸತ್ಯನಾರಾಯಣ ಇವರಿಗೆ ಸೇರಿದ ಜಮೀನು, ಶ್ರೀ ತಿಮ್ಮಯ್ಯ ಇವರಿಗೆ ಸೇರಿದ ಜಮೀನು	1-20
36.	39/1 ರ ಪೈಕಿ	3-09
37.	40/1 ರ ಪೈಕಿ	1-07 ½
38.	44/1 ರ ಪೈಕಿ ಕೆ. ಬಿ. ಸತ್ಯನಾರಾಯಣ ಇವರಿಗೆ ಸೇರಿದ ಜಮೀನು, ಶ್ರೀಮತಿ ಲಕ್ಷ್ಮಮ್ಮ ಇವರಿಗೆ ಸೇರಿದ ಜಮೀನು	1-35
	ಒಟ್ಟು	**112-29 ½**

ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸುವುದು

6(3) ಶ್ರೀ ಕರಡಿ ಸಂಗಣ್ಣ ಅಮರಪ್ಪ:(ಕೊಪ್ಪಳ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ತಾಲ್ಲೂಕಿನ ಯತ್ನಟ್ಟಿ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜನ್ನು ನಿರ್ಮಿಸಲು ಉದ್ದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;.

ಆ) ಬಂದಿದ್ದಲ್ಲಿ, ಸರ್ಕಾರವು ತೆಗೆದುಕೊಂಡ ಕ್ರಮಗಳೇನು? ಹಾಗೂ ಸದರಿ ಕಾಮಗಾರಿಗೆ ನಿಗದಿಪಡಿಸಿದ ಹಣವೆಷ್ಟು?

ಇ) ಈ ಕಾಮಗಾರಿಯನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):

ಅ) ಬಂದಿದೆ.

ಆ) ಸದರಿ ಯೋಜನೆಗೆ ಸಂಬಂಧಿಸಿದಂತೆ ರೂ.12.00 ಕೋಟಿಗಳಿಗೆ ಅಂದಾಜನ್ನು ಸಿದ್ಧಪಡಿಸಲಾಗಿದೆ.

ಪ್ರಸ್ತಾಪಿತ ಬ್ರಿಡ್ಜ್ ಕಂ ಬ್ಯಾರೇಜಿನ ಸ್ಥಳವು ಹುಬ್ಬಳ್ಳಿ-ಗೂಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಕಾಸ್‌ವೇ ಹತ್ತಿರದಲ್ಲಿರುತ್ತದೆ. ಸದರಿ ಕಾಸ್‌ವೇಯು ಅಕ್ಟೋಬರ್ 2009ರಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾಗಿದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಹೊಸ ಸೇತುವೆ ನಿರ್ಮಿಸುವ

ಪ್ರಸ್ತಾಪವಿರುತ್ತದೆ. ಯತ್ನಟ್ಟಿ ಬ್ರಿಡ್ಜ್ ಕಂ ಬ್ಯಾರೇಜ್‌ನ ಬದಲಾಗಿ ಬ್ಯಾರೇಜನ್ನು ಹೊಸ ಸೇತುವೆಯ ಜೊತೆಗೆ ನಿರ್ಮಿಸುವ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದೊಂದಿಗೆ ಚರ್ಚಿಸಲಾಯಿತು. ಆದರೆ ಪ್ರಾಧಿಕಾರವು ಈಗಾಗಲೇ ಸೇತುವೆ ಕಾಮಗಾರಿಯನ್ನು ಪ್ರಾರಂಭಿಸಿರುವುದರಿಂದ ಈ ಪ್ರಸ್ತಾವನೆಗೆ ಪ್ರಾಧಿಕಾರವು ಒಪ್ಪಿರುವುದಿಲ್ಲ.

ಯತ್ನಟ್ಟಿ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ ಕಾಮಗಾರಿಯ ಪ್ರಸ್ತಾವನೆ ನೀರಿನ ಲಭ್ಯತೆ ಹಾಗೂ ತಾಂತ್ರಿಕ ಅನುಮೋದನೆಗಾಗಿ ಪರಿಶೀಲನೆಯಲ್ಲಿದೆ. ತಾಂತ್ರಿಕ ಅನುಮೋದನೆ ಪಡೆದು ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮದ ಮೂಲಕ ಕೈಗೊಳ್ಳಲು ಕ್ರಮವಹಿಸಲಾಗುವುದು.

ಇ) ಪ್ರಸ್ತಾವನೆಗೆ ತಾಂತ್ರಿಕ ಅನುಮೋದನೆ ದೊರೆತ ನಂತರ ಕೈಗೆತ್ತಿಕೊಳ್ಳಲಾಗುವುದು.

ನದಿ ಸಂಪರ್ಕ ಹಳ್ಳಗಳಲ್ಲಿ ಹೂಳು ತುಂಬಿರುವುದು

7(20) ಶ್ರೀ ಯು ಟಿ ಖಾದರ್:(ಮಂಗಳೂರು) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಹರಿಯುವ ನದಿಗಳನ್ನು ಸಂಪರ್ಕಿಸುವ ಹಳ್ಳಗಳಲ್ಲಿ ಹೂಳು ತುಂಬಿ ಅತಿವೃಷ್ಟಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಹಳ್ಳಗಳಲ್ಲಿ ತುಂಬಿರುವ ಹೂಳನ್ನು ಎತ್ತಲು ಸರ್ಕಾರವು ಕಾರ್ಯಕ್ರಮಗಳೇನಾದರು ಹಮ್ಮಿಕೊಳ್ಳುವುದೇ

ಶ್ರೀ ಗೋವಿಂದ ಎಂ ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು):

ಅ) ಬಂದಿದೆ.

ಆ) ಅನುದಾನದ ಕೊರತೆಯಿಂದಾಗಿ ಎಲ್ಲಾ ಹಳ್ಳಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. 2009–10ನೇ ಸಾಲಿನಲ್ಲಿ ಮಂಗಳೂರು ತಾಲ್ಲೂಕಿನ